4. ಸಭೆಯ ಮುಂದಿಡಲಾಗುವ ಕಾಗದ ಪತ್ರಗಳು

ಉಪಾಧ್ಯಕ್ಷರು (ಮಾನ್ಯ ಮುಖ್ಯಮಂತ್ರಿಗಳ ಪರವಾಗಿ): ಭಾರತ ಸಂವಿಧಾನದ 213 (2) (ಎ) ಅನುಚ್ಛೇದದ ಮೇರೆಗೆ 1998ರ ದಿ ಎಲೆಕ್ಟ್ರಿಸಿಟಿ ಲಾಸ್ (ಕರ್ನಾಟಕ ಅಮೆಂಡ್‌ಮೆಂಟ್) ಅಧ್ಯಾದೇಶಕ್ಕೆ ಸಂಬಂಧಿಸಿದಂತೆ ದಿನಾಂಕ: 1-4-1998 ರಂದು ಹೊರಡಿಸಲಾದ ಸಂವ್ಯಶಾಇ 4 ಶಾಸನ 98 ನೇ ಕ್ರಮಾಂಕದ ಅಧಿಸೂಚನೆಯನ್ನು ಮಂಡಿಸುವುದು.

ಶ್ರೀ ಎಂ.ಪಿ.ಪ್ರಕಾಶ್: ಸನ್ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ಸಭೆಯ ಮುಂದೆ ಭಾರತ ಸಂವಿಧಾನದ 213 (2) (ಎ) ಅನುಚ್ಛೇದದ ಮೇರೆಗೆ 1998ರ ದಿ ಎಲೆಕ್ಟ್ರಿಸಿಟಿ ಲಾಸ್ (ಕರ್ನಾಟಕ ಅಮೆಂಡ್‌ಮೆಂಟ್) ಅಧ್ಯಾದೇಶಕ್ಕೆ ಸಂಬಂಧಿಸಿದಂತೆ ದಿನಾಂಕ: 1-4-1998 ರಂದು ಹೊರಡಿಸಲಾದ ಸಂವ್ಯಶಾಇ 4 ಶಾಸನ 98 ನೇ ಕ್ರಮಾಂಕದ ಅಧಿಸೂಚನೆಯನ್ನು ಮಂಡಿಸುತ್ತಿದ್ದೇನೆ.

ಉಪಾಧ್ಯಕ್ಷರು: ಮಂಡಿಸಲಾಯಿತು

5. ಅಧ್ಯಕ್ಷರ ಅಪ್ಪಣೆ ಮೇರೆಗೆ ಚರ್ಚಿಸಲಾದ ವಿಷಯಗಳು

(1) ತುಮಕೂರು ಹೇಮಾವತಿ ನಾಲ ವಲಯದಲ್ಲಿ ನಾಲೆಗೋಸ್ಕರ ಸ್ವಾಧೀನಪಡಿಸಿಕೊಂಡಿರುವ ಜಮೀನಿಗೆ ಪರಿಹಾರ.

+ ಶ್ರೀ ಎಸ್.ಪಿ.ಮುದ್ದಹನುಮೇಗೌಡ: ಮಾನ್ಯ ಉಪಾಧ್ಯಕ್ಷರೇ, ಈ ತುಮಕೂರು ಹೇಮಾವತಿ ನಾಲಾ ವಲಯದಲ್ಲಿ ವಿಶೇಷ ಭೂಸ್ವಾಧೀನಾಧಿಕಾರಿಗಳ ಒಂದು ಕಛೇರಿ ಇದೆ. ಇವತ್ತು ಸಾವಿರಾರು ಎಕರೆ ಜಮೀನು ಈ ನಾಲೆಗೋಸ್ಕರ ಸ್ವಾಧೀನಪಡಿಸಿಕೊಂಡಿದ್ದಾರೆ. ಭೂಸ್ವಾಧೀನದ ಕಾಯ್ದೆಯಡಿಯಲ್ಲಿ ಕೆಲವು ಜಮೀನುಗಳನ್ನು ತೆಗೆದುಕೊಂಡಿದ್ದಾರೆ ಮತ್ತೆ ಕೆಲವೊಂದು ರೈತರಿಗೆ ನಿಮಗೆ ಪರಿಹಾರವನ್ನು ಹೆಚ್ಚಿಗೆ ಕೊಡಿಸುತ್ತೇವೆ ಮತ್ತು ಬೇಗ ಕೊಡಿಸುತ್ತೇವೆ ಎನ್ನುವ ಆಶ್ವಾಸನೆಯನ್ನು ಕೊಟ್ಟು ಒಂದು ಜಮೀನನ್ನು ಸ್ವಾಧೀನಪಡಿಸಿಕೊಂಡಿದ್ದಾರೆ. ನಾನೇನು ಹೇಳಲಿಕ್ಕೆ ಹೊರಟಿದ್ದೇನೆಂದರೆ ಎಂ.ಪಿ.ಪ್ರಕಾಶ್‌ರವರು ಮತ್ತು ಉಪಮುಖ್ಯಮಂತ್ರಿಗಳೂ ಇಲ್ಲಿದ್ದಾರೆ. ಇದನ್ನು ಗಮನಿಸಬೇಕು. I am making a statement on the floor of the House. It is a very serious in nature and particularly so far as my constituency is concerned, it is a serious matter. ಈಗ ಏನಾಗಿದೆ ಎಂದರೆ ಈ ತುಮಕೂರು ಹೇಮಾವತಿ ನಾಲಾ ವಲಯದಲ್ಲಿ ಜಮೀನನ್ನು ಕಳೆದುಕೊಂಡಿರುವವರಿಗೆ ಪರಿಹಾರ ಕೊಡುವ ಒಂದು ಕಛೇರಿ. ವಿಶೇಷ ಭೂಸ್ವಾಧೀನಾಧಿಕಾರಿಗಳ ಕಛೇರಿ.